ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬಂಟ್ವಾಳ

ಸಿ.ಸಿ. ನಂಬ್ರ: **307/2023** ಸಿ.ಡಬ್ಲ್ಯೂ: **3** ಪಿ.ಡಬ್ಲ್ಯೂ: **3**

ಸಾಕ್ಷಿದಾರರ ಹೇಳಿಕೆ:

| | | |
|---|---|---|
| ಸಾಕ್ಷಿಯ ಹೆಸರು | : | ಹಸೈನಾರ್ |
| ತಂದೆಯ ಹೆಸರು | : | ಫಕೀರ್ ಬ್ಯಾರಿ |
| ವಯಸ್ಸು | : | 62 |
| ಉದ್ಯೋಗ | : | ಅಂಗಡಿ ವ್ಯಾಪಾರ |
| ವಾಸ ಸ್ಥಳ | : | ಕೋಡಾಜೆ, ಬಂಟ್ವಾಳ ತಾಲೂಕು |

ದಿ: **13.09.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಸದ್ರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಿಪಿ-4 ರಿಂದ 7 ಫೋಟೋದಲ್ಲಿ ಕಾಣುವ ವಾಹನವನ್ನು ಹಾಗೂ ಚಾರ್ಜ್ ಶೀಟ್ ನಲ್ಲಿ ಲಗತ್ತಿಸಿರುವ ಕಲರ್ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ. ನನಗೆ ಆರೋಪಿಯು ಗೊತ್ತಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಮಾನ್ಯ ಎ.ಪಿ.ಪಿ.ಯವರು ವಿನಂತಿಸಿಕೊಳ್ಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಎ.ಪಿ.ಪಿ. ಯವರಿಂದ:

ದಿ: 06.05.2022 ರಂದು ಮುಂಜಾನೆ 1.15 ಗಂಟೆಗೆ ಬಂಟ್ವಾಳ ತಾಲೂಕು ನೆಟ್ಲಮುಡ್ನೂರು ಗ್ರಾಮದ ಕೋಡಾಜೆ ಎಂಬಲ್ಲಿ ಕೆಎ-14-ಬಿ-2579 ಟೋಯಿಂಗ್ ವಾಹನವನ್ನು ಮಾಣಿ - ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಪರಿಣಾಮ ಚಾಲಕನಾದ ಆರೋಪಿಯ ಹತೋಟಿ ತಪ್ಪಿ ರಸ್ತೆಯ ಎಡಬದಿಯಲ್ಲಿದ್ದ ಚಾಸಾ-2 ರವರ ಬಾಬ್ತು

ನಂದಿನಿ ಸ್ಟೋರ್, ನನ್ನ ಬಾಬ್ತು ಅರ್ಫಾನ್ ಹೋಟೇಲ್, ಅಲ್ಲದೇ ಚಾಸಾ-1 ರವರ ಅಂಗಡಿಯೊಳಗೆ ಟೋಯಿಂಗ್ ವಾಹನವನ್ನು ನುಗ್ಗಿ ಡಿಕ್ಕಿಪಡಿಸಿದ ಪರಿಣಾಮ ಚಾಸಾ-2 ರವರ ಬಾಬ್ತು ನಂದಿನಿ ಸ್ಟೋರ್ ನ ಮುಂಭಾಗದ ಐದು ಕಬ್ಬಿಣದ ಕಂಬ ಹಾಗೂ ಅಂಗಡಿಯ ಮುಂದಿನ ಬೋರ್ಡ್ ಹಾಗೂ ಎಳನೀರು ಹಾಕುವ ಬಾಕ್ಸ್ ಜಖಂ ಆಗಿದ್ದು ರೂ.1 ಲಕ್ಷ ನಷ್ಟವುಂಟಾಗಿರುತ್ತದೆ, ಅರ್ಫಾನ್ ಹೋಟೇಲ್‌ನ ಮುಂದಿನ ಐದು ಕಬ್ಬಿಣದ ಕಂಬ ಹಾಗೂ ಆರು ಸಿಮೆಂಟ್ ಶೀಟ್ ಗಳು ಮತ್ತು ಎದುರಿಗಿರಿಸಿದ ಹೋಟೇಲ್ ಬೋರ್ಡ್ ಜಖಂಗೊಂಡು ನನಗೆ ರೂ.50,000/- ನಷ್ಟವುಂಟಾಗಿರುತ್ತದೆ ಮತ್ತು ಐದು ಸಿಮೆಂಟ್ ಶೀಟ್ ಕಂಬ, ಅದಕ್ಕೆ ಹಾಕಿದ ಇಪ್ಪತ್ತು ಸಿಮೆಂಟ್ ಶೀಟ್, ಬಾಗಿಲು, ದಾರಂದ, ಕೆಂಪು ಕಲ್ಲಿನ ಗೋಡೆ, ಸಿಮೆಂಟ್ ಹಾಲೋ ಬ್ಲಾಕ್ಸ್, ಒಂದು ರೆಫ್ರಿಜರೇಟರ್, ಕಡಪ ಕಲ್ಲು, ಕಬ್ಬಿಣದ ಟೇಬಲ್ ಐದು, ಓಲ್ಯಾಸ್ ಕಂಪನಿಯ ಫ್ರಿಡ್ಜ್ ಒಂದು, ಇನ್‌ವರ್ಟರ್, ಅದರ ಬ್ಯಾಟರಿ ಹಾಗೂ ಇನ್ನಿತರ ಸೊತ್ತುಗಳು ಜಖಂಗೊಂಡು ಚಾಸಾ-1 ರವರಿಗೆ ರೂ.6 ಲಕ್ಷ ನಷ್ಟವುಂಟಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರ ಮುಂದೆ ನನಗೆ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇರುವುದಿಲ್ಲ ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಬಂಟ್ವಾಳ